ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃರವರ ನ್ಯಾಯಾಲಯದಲ್ಲಿ,
ನ.ರಾ.ಪುರ.
ಸಿಸಿ ನಂ 06/2025

ಸಿ ಡಬ್ಯ್ಲುಃ– 01/ಪಿ ಡಬ್ಲ್ಯು ಃ-01

| | |
|---|---|
| ಸಾಕ್ಷಿದಾರರ ಹೆಸರು | ಃ ಲಕ್ಷ್ಮಣ ಪೂಜಾರಿ |
| ತಂದೆಯ ಹೆಸರು | ಃ ರಾಮ ಪೂಜಾರಿ |
| ವಯಸ್ಸು | ಃ 68 ವರ್ಷ |
| ಉದ್ಯೋಗ | ಃ ಕೂಲಿ ಕೆಲಸ |
| ವಾಸಸ್ಥಳ | ಃ ಮೆಣಸೂರು |

ದಿನಾಂಕಃ 27-07-2026 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಮಾಡಿಸಲಾಯಿತು.
ದಂಡ ಪ್ರಕ್ರಿಯಾ ಸಂಹಿತೆಯ ಕಲಂ 299 ರ ಅಡಿಯಲ್ಲಿ ಸಾಕ್ಷಿಯ ವಿಚಾರಣೆ
ಮುಖ್ಯವಿಚಾರಣೆ ಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

1. ಚಾಸಾ-2 ರವರು ಕರಿಬಸವೇಶ್ವರ ದೇವಸ್ಥಾನದ ಅರ್ಚಕರು ಇರುತ್ತಾರೆ. ಚಾಸಾ-3 ರಿಂದ ಚಾಸಾ-5 ರವರ ಪರಿಚಯ ಇರುತ್ತದೆ. ನಾನು ಕರಿಬಸವೇಶ್ವರ ದೇವಸ್ಥಾನದಲ್ಲಿ ಒಳಗೆ ಮತ್ತು ಹೊರಗೆ ಸ್ವಚ್ಚತಾ ಕೆಲಸ ಮಾಡಿಕೊಂಡು ಇರುತ್ತೇನೆ. ದಿಃ 01.06.2023 ರಂದು ಸಂಜೆ 6.00 ಗಂಟೆಗೆ ನಾನು ಮೆಣಸೂರು ರಸ್ತೆಯಲ್ಲಿರುವ ಕರಿಬಸವೇಶ್ವರ ದೇವಸ್ಥಾನದ ಬಾಗಿಲನ್ನು ಬೀಗ ಹಾಕಿಕೊಂಡು ಹೋಗಿದ್ದು, ನಂತರ ಮಾರನೇ ದಿನ ಬೆಳಗ್ಗೆ 6.00 ಗಂಟೆಗೆ ನಾನು ದೇವಸ್ಥಾನದ ಬಳಿ ಬಂದು ನೋಡಲಾಗಿ ಸದರಿ ದೇವಸ್ಥಾನದ ಮುಂದಿನ ಬಾಗಿಲನ್ನು ತೆರೆದಿದ್ದು, ಸದರಿ ಬಾಗಿಲಿಗೆ ಹಾಕಿದ ಬೀಗದ ಲಾಕ್ ಅನ್ನು ಮೀಟಿ ತೆಗೆದಿರುತ್ತಾರೆ. ಸದರಿ ದೇವಸ್ಥಾನದಲ್ಲಿ ಇದ್ದ ಕಾಣಿಕೆ ಹುಂಡಿಯು ತೆರೆದಿದ್ದು ಅದರಲ್ಲಿ ಸುಮಾರು ರೂ. 50 ಸಾವಿರ ಹಣ ಇದ್ದು ಅದನ್ನು ಯಾರೋ ಕಳ್ಳತನ ಮಾಡಿಕೊಂಡು ಹೋಗಿದ್ದು ನಂತರ ನಾನು ಸದರಿ ವಿಚಾರವನ್ನು ದೇವಸ್ಥಾನದ ಅರ್ಚಕರಿಗೆ ಮತ್ತು ದೇವಸ್ಥಾನವು ಮುಜರಾಯಿ ಇಲಾಖೆಗೆ ಸಂಬಂಧಿಸಿದ್ದು ಅವರಿಗೆ ತಿಳಿಸಿ ಪೋಲಿಸ್ ಠಾಣೆಗೆ ದೂರನ್ನು ಕೊಟ್ಟಿರುತ್ತೇನೆ.
2. ಅದೇ ದಿನ ಪೋಲಿಸರು ಸದರಿ ಸ್ಥಳಕ್ಕೆ ಬಂದಿದ್ದು, ನಾನು ಸದರಿ ಸ್ಥಳವನ್ನು ತೋರಿಸಿದ್ದು, ಆ ಕಾಲಕ್ಕೆ ಮಂಜುನಾಥ ಮತ್ತು ಒಬ್ಬ ತಾಲೂಕು ಕಛೇರಿಯ ಮಹಿಳೆ ಹಾಜರಿದ್ದು, ಮಹಜರ್ ಅನ್ನು ಮಧ್ಯಾಹ್ನ 3.00 ರಿಂದ 4.00 ಗಂಟೆಯವರೆಗೆ ಮಾಡಲಾಗಿರುತ್ತದೆ. ನಂತರ 8ನೇ ತಾರೀಖು 2023 ರಲ್ಲಿ ಪೋಲಿಸರು ಆರೋಪಿಗಳಾದ ಮಣಿಕಂಠ ಮತ್ತು ಇನ್ನೊಬ್ಬನನ್ನು ಕರೆದುಕೊಂಡು ಬಂದಿದ್ದು ಆ ಕಾಲಕ್ಕೆ ನಾನು, ಪ್ರವೀಣ ಮತ್ತು ಶ್ರೀನಾಥ ಹಾಜರಿದ್ದು, ನಮ್ಮ ಸಮಕ್ಷಮ ಮಹಜರ್ ಅನ್ನು ಮಾಡಿ 2 ಭಾವಚಿತ್ರಗಳನ್ನು ತೆಗೆದಿರುತ್ತಾರೆ. ನಂತರ ಪೋಲಿಸರು ದಿಃ 03.08.2023 ರಂದು ನನ್ನ ಮರುಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ. ಸಾಕ್ಷಿಯು

ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**3.** ಸಾಕ್ಷಿ ತಾವು ನೀಡಿದ ದೂರಿನ ಯಥಾನಕಲು ಪ್ರತಿ ನೋಡಿ ಗುರುತಿಸಿದ್ದು, ಅದನ್ನು ನಿಪಿ-1 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ದಿಃ 02.06.2023 ರಂದು ಮಾಡಿದ ಮಹಜರ್ ಯಥಾನಕಲು ಪ್ರತಿ ನೋಡಿ ಗುರುತಿಸಿದ್ದು, ನಿಪಿ-2 ಎಂದು, ಸಾಕ್ಷಿ ಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ದಿಃ 03.08.2023 ರಂದು ಮಹಜರ್ ಯಥಾನಕಲು ಪ್ರತಿ ನೋಡಿ ಗುರುತಿಸಿದ್ದು ಅದನ್ನು ನಿಪಿ-3 ಎಂದು, ಸಾಕ್ಷಿ ಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ನಿಪಿ-3 ಅನ್ನು ಮಾಡುವ ಕಾಲಕ್ಕೆ ತೆಗೆದ 2 ಭಾವಚಿತ್ರಗಳ ಯಥಾನಕಲು ಪ್ರತಿಯನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-4 ಮತ್ತು ನಿಪಿ-5 ಎಂದು ಗುರುತಿಸಿಲಾಯಿತು.

<u>ಪಾಟೀ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ</u>

**1.** ದಿಃ 02.06.2023 ರಂದು ಕೃತ್ಯ ಸ್ಥಳದ ಪಂಚನಾಮೆ ಮಾಡುವ ಕಾಲಕ್ಕೆ ಆ ದಿನ ಚಾಸಾ-7 ರವರು ಪಂಚರಾಗಿ ಬಂದು ಸಹಕರಿಸಿರುತ್ತಾರೆ ಎಂದರೆ ಸರಿ. ದಿಃ 03.08.2023 ರಂದು ಪೋಲಿಸರು ಮಹಜರ್ ಅನ್ನು ಮಾಡಿರುತ್ತಾರೆ ಎಂದರೆ ಸರಿ. ಅದೇ ದಿನ ಆರೋಪಿತರು ದೇವಸ್ಥಾನದ ಹುಂಡಿಯ ಲಾಕರ್ ಅನ್ನು ಕಬ್ಬಿಣದ ರಾಡ್ ಮತ್ತು ಕಟ್ಟಿಂಗ್ ಪ್ಲೇಯರ್ ಸಹಾಯದಿಂದ ಮೀಟಿ ಅದರಲ್ಲಿದ್ದ ರೂ. 23,500/- ಹಣವನ್ನು ತೆಗೆದುಕೊಂಡು ಕಳ್ಳತನ ಮಾಡಿಕೊಂಡು ಹೋಗಿರುವುದಾಗಿ ನಾನು ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿ.

ಮರು ವಿಚಾರಣೆ ಃ ಇಲ್ಲ ಃಃ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರುಃ ನ.ರಾ.ಪುರ.

ಸಾಕ್ಷಿದಾರರ ಸಹಿಃ